ಅತ್ಯಾದ್ಯತೆ

ಸರ್ವ ಶಿಕ್ಷಣ ಅಭಿಯಾನ - ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು 01

ಸಂಖ್ಯೆ: ಸಶಿಅ/ಒಓಎಸ್‌ಸಿ/ಚಿ.ಅಂ/ವಿ.ತ.ಕಾ/ಸುತ್ತೋಲೆ/2012-13 ದಿನಾಂಕ: 26.03.2012

# ಸುತ್ತೋಲೆ

ವಿಷಯ: 2012ನೇ ಸಾಲಿನ ಬೇಸಿಗೆ ಅವಧಿಯಲ್ಲಿ ಆರ್.ಟಿ.ಇ - 2009 ಅಡಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಮೂರು ತಿಂಗಳ ಅವಧಿಗೆ ವಿಶೇಷ ತರಬೇತಿ ಕಾರ್ಯಕ್ರಮ - ಚಿಣ್ಣರ ಅಂಗಳ ನಡೆಸುವ ಬಗ್ಗೆ.

ಉಲ್ಲೇಖ: 1) ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ ವಾರ್ಷಿಕ ಕ್ರಿಯಾಯೋಜನೆ-2012-13.
2) ಭಾರತ ಸಂವಿಧಾನದ ಅಧಿನಿಯಮ- ಆರ್.ಟಿ.ಇ- 2009.

**********

ಜನವರಿ-2010 ರಲ್ಲಿ ರಾಜ್ಯಾದ್ಯಂತ ನಡೆದ ಸಮಗ್ರ ಮಕ್ಕಳ ಗಣತಿ ಅಂಕಿ-ಅಂಶಗಳು ಜಿಲ್ಲಾ ಹಂತದಲ್ಲಿ ಜನವರಿ 2012ರಲ್ಲಿ ಪ್ರಸಕ್ತಿಕರಿಸಿ, 7 ರಿಂದ 14 ವರ್ಷ ವಯೋಮಾನದ, ಶಾಲೆಯಿಂದ ಹೊರಗುಳಿದ ಶಾಲೆಗೆ ಸೇರದಿರುವ ಹಾಗೂ ಶಾಲೆ ಸೇರಿ ಆನಂತರ ಬಿಟ್ಟ ಮಕ್ಕಳ ಮಾಹಿತಿಯನ್ನು ಸಿದ್ಧಪಡಿಸಲಾಗಿದೆ. **ಆರ್.ಟಿ.ಇ - 2009 ರನ್ವಯ ಅಂತಹ ಮಕ್ಕಳಿಗೆ ಅವರ ವಯಸ್ಸು ಹಾಗೂ ತರಗತಿಗೆ ತಕ್ಕಂತೆ ಅಗತ್ಯಕ್ಕೆ ಅನುಗುಣವಾಗಿ ವಿಶೇಷ ತರಬೇತಿಯನ್ನು ನಡೆಸಿ ಮುಖ್ಯವಾಹಿನಿಗೆ ಸೇರಿಸುವುದು ಕಡ್ಡಾಯವಾಗಿರುತ್ತದೆ ಮತ್ತು ವಿಶೇಷ ತರಬೇತಿಗೆ ಒಳಪಡಿಸುವ ಮುನ್ನ ಹತ್ತಿರದ ಶಾಲೆಗಳಿಗೆ ವಯೋಮಾನಕ್ಕೆ ತಕ್ಕಂತೆ ದಾಖಲು ಮಾಡಿ ನಂತರ ತರಬೇತಿ ನೀಡುವ ಕೇಂದ್ರಗಳಲ್ಲಿ ವಿಶೇಷ ತರಬೇತಿ ಕಾರ್ಯಕ್ರಮ ನಡೆಸಬೇಕಾಗಿದೆ.** ಈ ಹಿನ್ನೆಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ 2012ನೇ ಸಾಲಿನ ಬೇಸಿಗೆ ಅವಧಿ - 15.04.12 ರಿಂದ 14.07.12 ರವರೆಗೆ ಸತತವಾಗಿ ಮೂರು ತಿಂಗಳ ಅವಧಿಗೆ ವಿಶೇಷ ತರಬೇತಿ ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಲಾಗಿದೆ. ರಾಜ್ಯದ ಪ್ರತಿಯೊಂದು ಶಾಲೆಯಿಂದ ಹೊರಗುಳಿದ ಮಗುವಿಗೆ ತನ್ನ ವಯಸ್ಸಿಗೆ ಅನುಗುಣವಾಗಿ ಔಪಚಾರಿಕ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಕನಿಷ್ಠ ಕಲಿಕಾ ಸಾಧನೆಯನ್ನು ಗಳಿಸುವ ಉದ್ದೇಶದಿಂದ ವಸತಿಸಹಿತ ಹಾಗೂ ವಸತಿರಹಿತ ವಿಶೇಷ ತರಬೇತಿ ಕೇಂದ್ರಗಳನ್ನು ತೆರೆಯಲಾಗುವುದು. ಈ ಸಂಬಂಧ ಈ ಕೆಳಗಿನ ವಿವರಗಳನ್ನು ನೀಡಲಾಗಿದೆ.

➢ **ಕಾರ್ಯಕ್ರಮದ ಸ್ವರೂಪ ಹಾಗೂ ಅವಧಿ:**

* ಒಟ್ಟು 269 ವಸತಿಸಹಿತ ವಿಶೇಷ ತರಬೇತಿ ಕೇಂದ್ರಗಳ ಮೂಲಕ 5798 ಮಕ್ಕಳಿಗೆ 15.04.12 ರಿಂದ 14.07.2012 ರವರೆಗೆ 3 ತಿಂಗಳ ಅವಧಿಗೆ ವಿಶೇಷ ತರಬೇತಿ ನೀಡುವುದು.
* ಒಟ್ಟು 480 ವಸತಿರಹಿತ ಚಿಣ್ಣರ ಅಂಗಳ ಕೇಂದ್ರಗಳ ಮೂಲಕ 10091 ಮಕ್ಕಳಿಗೆ 15.04.12 ರಿಂದ 14.07.2012 ರವರೆಗೆ 3 ತಿಂಗಳ ಅವಧಿಗೆ ವಿಶೇಷ ತರಬೇತಿ ನೀಡುವುದು.
* **ಶಾಲೆಬಿಟ್ಟ / ಶಾಲೆಗೆ ದಾಖಲಾಗದ ಮಕ್ಕಳಿಗೆ ಪೂರ್ವಪರೀಕ್ಷೆ ನಡೆಸಿ ಅವರ ಕಲಿಕಾ ಹಂತಗಳನ್ನು ನಿರ್ಧರಿಸಿಕೊಂಡು ಪ್ರತಿ ಮಗುವಿಗೆ ಸಂಬಂಧಿಸಿದಂತೆ ಈ ಕೆಳಗಿನ ನಮೂನೆಯಲ್ಲಿ Individual Education Plan (IEP) ಮಾಡಿಕೊಂಡು ಮಗುವಿನ ವಯಸ್ಸಿಗೆ ಹಾಗೂ ತಂಗತಿಗೆ ಅನುಗುಣವಾಗಿ ನಿಗದಿಪಡಿಸಿದ ಕಲಿಕಾ ಕಾರ್ಯಕ್ರಮಗಳನ್ನು ನಡೆಸುವುದು.**

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಭಾವಚಿತ್ರ ಅಂಟಿಸಿ

# ಮಗುವಿನ ವೈಯಕ್ತಿಕ ಶೈಕ್ಷಣಿಕ ಯೋಜನೆ

- ಜಿಲ್ಲೆ............................ ತಾಲ್ಲೂಕು................................. ಕ್ಲಸ್ಟರ್ ...............................
- ಚಿಣ್ಣರ ಅಂಗಳ ಕೇಂದ್ರ ..........................................................................
- ಮಗುವಿನ ಹೆಸರು..........................................................................
- ಜನ್ಮದಿನಾಂಕ/ವಯಸ್ಸು............................................ ಲಿಂಗ.........................................
- ತಂದೆ ಹೆಸರು:............................................................
- ಮಗುವಿನ ವಿಳಾಸ ..........................................................................................
- ಶಾಲೆಗೆ ದಾಖಲಾಗದೆ ಇರುವ ಮಗು ☐ ಶಾಲೆ ಸೇರಿ ಬಿಟ್ಟ ಮಗು ☐
- ಶಾಲೆಯಿಂದ ಹೊರಗುಳಿಯಲು ಕಾರಣ:
- ವಿಶೇಷ ತರಬೇತಿ ಕೇಂದ್ರದ ವಿಧ ಮತ್ತು ಅವಧಿ............ ಹಾಜರಾದ ದಿನಗಳು ☐
- ಮಗುವಿನ ಕಲಿಕಾ ಸಾಮರ್ಥ್ಯದ ಬಗ್ಗೆ ಸಂಕ್ಷಿಪ್ತ ವಿವರ
- ಮಗುವಿನ ವಯಸ್ಸಿಗೆ ಹಾಗೂ ಕಲಿಕಾ ಸಾಮರ್ಥ್ಯಕ್ಕೆ ಅನುಗುಣವಾಗಿ ಕೇಂದ್ರದಲ್ಲಿ ಸದರಿ ಮಗುವಿಗೆ ಯಾವ ಕಲಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಎಂಬುದರ ಬಗ್ಗೆ ಪಟ್ಟಿ / ಟಿಪ್ಪಣಿ ನಮೂದಿಸುವುದು

| ವಿಷಯ | ಮೊದಲ 15 ದಿನಗಳಲ್ಲಿ ಮಗುವಿನ ಶೈಕ್ಷಣಿಕ ಸ್ಥಿತಿ | | ಅಂತಿಮ ಪರೀಕ್ಷೆಯಲ್ಲಿ ಮಗುವಿನ ಶೈಕ್ಷಣಿಕ ಸ್ಥಿತಿ |
|---|---|---|---|
| | ಪೂರ್ವ ಪರೀಕ್ಷೆ | ಸಾಫಲ್ಯ ಪರೀಕ್ಷೆ | |
| ಪ್ರಥಮ ಭಾಷೆ | | | |
| ದ್ವಿತೀಯ ಭಾಷೆ | | | |
| ತೃತೀಯ ಭಾಷೆ | | | |
| ಗಣಿತ | | | |
| ಪರಿಸರ ಅಧ್ಯಯನ | | | |
| ಸಾಮಾನ್ಯ ವಿಜ್ಞಾನ | | | |
| ಸಮಾಜ ವಿಜ್ಞಾನ | | | |
| ಪಾರ್ಟ್ 'ಬಿ' | | | |

(ಸೂಚನೆ: ಮಗುನಿನ ಸಾಧನೆಯನ್ನು ವಿಷಯವಾರು ಗ್ರೇಡ್‌ಗಳಲ್ಲಿ ನಮೂದಿಸುವುದು. A- ಪೂರ್ಣ ಕಲಿಕೆ, B- ಭಾಗಶಃ ಕಲಿಕೆ, C- ಕಲಿಕೆ ಆಗಿರುವುದಿಲ್ಲ. )

- ಕೇಂದ್ರದ ಅವಧಿ ಮುಗಿದ ಕೂಡಲೇ ಮುಖ್ಯವಾಹಿನಿಗೆ ದಾಖಲಿಸಲಾಗಿದೆಯೇ ಹೌದು / ಇಲ್ಲ
  1. ಶಾಲೆಯ ಹೆಸರು :
  2. ತರಗತಿ :
  3. ದಾಖಲಾತಿ ಸಂಖ್ಯೆ ಮತ್ತು ದಿನಾಂಕ:
- ಮುಖ್ಯವಾಹಿನಿಗೆ ದಾಖಲಿಸದಿದ್ದಲ್ಲಿ ಕಾರಣ ನಮೂದಿಸಿ

ಕೇಂದ್ರದ ಶಿಕ್ಷಕರ ಸಹಿ

ಮುಖ್ಯ ಗುರುಗಳ ಸಹಿ:

* ಯಾವ ಮಕ್ಕಳು 3 ತಿಂಗಳ ಅವಧಿಯಲ್ಲಿ ನಿಗಧಿಪಡಿಸಿದ ಕಲಿಕಾ ಸಾಮರ್ಥ್ಯ ಗಳಿಸುವಲ್ಲಿ ಹಿಂದೆ ಬೀಳುವರೋ ಅಂತಹ ಮಕ್ಕಳಿಗೆ ವಿಶೇಷ ತರಬೇತಿಯನ್ನು ಮುಂದುವರೆಸಬಹುದಾಗಿದೆ. (ಕಾಲಮಿತಿಯನ್ನು ನಿಗದಿಪಡಿಸಿಕೊಳ್ಳುವುದು.)

➢ **ಕೇಂದ್ರಗಳಲ್ಲಿ ಮಕ್ಕಳ ಸಂಖ್ಯೆ ಹಾಗೂ ಕೇಂದ್ರಗಳ ಆಯ್ಕೆ ಕುರಿತು:**

* ಜಿಲ್ಲೆಗಳು 2012-13 ನೇ ಸಾಲಿನ ಚಿಣ್ಣರ ಅಂಗಳ ವಿಶೇಷ ತರಬೇತಿ ಕಾರ್ಯಕ್ರಮಕ್ಕೆ (ವಸತಿಸಹಿತ ಹಾಗೂ ವಸತಿ ರಹಿತ) ಸಂಬಂಧಿಸಿದಂತೆ ಪಿ.ಎ.ಬಿ 2012-13 ರಡಿಯಲ್ಲಿ ಯೋಜಿಸಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ವಸತಿಯುತ ಹಾಗೂ ವಸತಿರಹಿತ ಕೇಂದ್ರಗಳನ್ನು ತೆರೆಯಬೇಕು.
* ಪಿ.ಎ.ಬಿ 2012-13 ರಡಿಯಲ್ಲಿ ಗುರುತಿಸಿರುವಂತೆ ಜಿಲ್ಲೆಯ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಯೋಜಿಸಿದಂತೆ, ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರವನ್ನು ತೆರೆಯುವುದು. ಒಂದು ಕೇಂದ್ರದಲ್ಲಿ ಗರಿಷ್ಠ 25 ಮಕ್ಕಳು ಇರುವಂತೆ ವ್ಯವಸ್ಥೆ ಮಾಡುವುದು. ಹೆಚ್ಚುವರಿ ಸೌಲಭ್ಯಗಳನ್ನು ಹೊಂದಿರುವ ಶಾಲೆಗಳನ್ನು ಗುರುತಿಸಿ ಅಲ್ಲಿಯೇ ವಿಶೆಷ ತರಬೇತಿ ನೀಡುವುದು. ಸ್ನಾನದ ಕೊಠಡಿ, ಶೌಚಾಲಯ ಹಾಗೂ ಅಡುಗೆ ಕೋಣೆ ಅಗತ್ಯವಿದ್ದಲ್ಲಿ ನಕ್ಷೆ ಮತ್ತು ಅಂದಾಜು ತಯಾರಿಸಿ ಶಾಲಾವಾರು ಸಲ್ಲಿಸುವುದು.
* ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರಗಳನ್ನು 2012ನೇ ಸಾಲಿನ ಮಕ್ಕಳ ಗಣತಿ ಸಮೀಕ್ಷೆಯಲ್ಲಿ ಗುರುತಿಸಲಾಗಿರುವ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಮಾತ್ರ ನಡೆಸಲಾಗುವುದು.
* ಶಾಲೆಯಿಂದ ಹೊರಗುಳಿದ ಮಕ್ಕಳು ಎಲ್ಲಿ ಸಾಂದ್ರವಾಗಿ ಇರುವರೋ ಅಂತಹ ಕಡೆ ಕೇಂದ್ರವನ್ನು ತೆರೆಯುವುದು. ಮಕ್ಕಳು ಒಂದೇ ಸ್ಥಳದಲ್ಲಿ ಕೇಂದ್ರೀಕೃತವಾಗಿದ್ದಲ್ಲಿ ವಸತಿರಹಿತ ಕೇಂದ್ರ ತೆರೆಯುವುದು. ಹಾಗೂ ಮಕ್ಕಳು ಹಲವಾರು ಕಡೆ ಚದುರಿ ಹೋಗಿದ್ದಲ್ಲಿ (Scattered) ವಸತಿಸಹಿತ ಕೇಂದ್ರ ತೆರೆಯುವುದು.

- ಪೋಷಕರ ಮನವೊಲಿಸಿ ಸೂಕ್ತ ಮಾಹಿತಿಯನ್ನು ನೀಡಿ ಕೇಂದ್ರಗಳಿಗೆ ಮಕ್ಕಳನ್ನು ಕಳುಹಿಸಲು ಪ್ರೋತ್ಸಾಹಿಸುವುದು.
- ಸಿ.ಆರ್.ಪಿ, ಇ.ಸಿ.ಓ, ಸಮಾಲೋಚಕರು ಹಾಗೂ ಮುಖ್ಯಶಿಕ್ಷಕರು ಮಕ್ಕಳನ್ನು ಕೇಂದ್ರಕ್ಕೆ ಕರೆತರುವ ಜವಾಬ್ದಾರಿಯನ್ನು ವಹಿಸಿಕೊಳ್ಳುವುದು. ಕೆ.ಜಿ.ಬಿ.ವಿ ಇರುವ ಕಡೆ ಹೆಣ್ಣು ಮಕ್ಕಳನ್ನು ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರಗಳಿಗೆ ಸೇರಿಸಿ, ಸೇತುಬಂಧ ನಂತರ ಜುಲೈ ತಿಂಗಳಿನಲ್ಲಿ ಕೆ.ಜಿ.ಬಿ.ವಿ ಶಾಲೆಗಳಿಗೆ ತಪ್ಪದೇ ಸೇರಿಸುವುದು.

➢ **ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರದ ಬೋಧಕರು:**

- ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರಗಳಿಗೆ ಉತ್ತಮ ಅನುಭವವುಳ್ಳ ಈ ಹಿಂದೆ ಚಿಣ್ಣರ ಅಂಗಳ ಕೇಂದ್ರದಲ್ಲಿ ಕಾರ್ಯನಿರ್ವಹಿಸಿದ ತರಬೇತಿ ಹೊಂದಿದ ಆಸಕ್ತ ಶಿಕ್ಷಕರನ್ನು ನಿಯೋಜಿಸಿಕೊಳ್ಳುವುದು. ಮುಖ್ಯಶಿಕ್ಷಕರು ಸೂಕ್ತ ಉಸ್ತುವಾರಿ ಮತ್ತು ಮಾರ್ಗದರ್ಶನ ನೀಡುವುದು. ಕಾರ್ಯನಿರ್ವಹಿಸುವ ಶಿಕ್ಷಕರಿಗೆ ನಿಯಮಾನುಸಾರ ಗಳಿಕೆ ರಜೆ ಸೌಲಭ್ಯ ಒದಗಿಸುವಲ್ಲಿ ಸಹಕರಿಸುವುದು.
- ಒಂದು ಕೇಂದ್ರದಲ್ಲಿ ಒಬ್ಬ ಶಿಕ್ಷಕರು ಮತ್ತು ವಸತಿ ಸಹಿತ ಕೇಂದ್ರಕ್ಕೆ ಇಬ್ಬರು ಹಾಗೂ ವಸತಿರಹಿತ ಕೇಂದ್ರಕ್ಕೆ ಒಬ್ಬ ಸ್ವಯಂಸೇವಕರನ್ನು ನೇಮಿಸಿಕೊಳ್ಳಬೇಕು. ಸಾಧ್ಯವಾದಷ್ಟು ಧನಾತ್ಮಕ ಮನೋಭಾವವುಳ್ಳ ಪಿಯುಸಿ ಹಾಗೂ ಡಿ.ಇಡಿ./ಬಿ.ಇಡಿ ಶಿಕ್ಷಕ ತರಬೇತಿ ಹೊಂದಿದ ಅಥವಾ ನಿವೃತ್ತ ಪ್ರಾಥಮಿಕ ಶಿಕ್ಷಕರನ್ನು ಎಸ್.ಡಿ.ಎಂ.ಸಿಯವರ ಸಹಕಾರದೊಂದಿಗೆ ಗುರ್ತಿಸಿಕೊಂಡು ಎನ್‌ಜಿಓ ಮೂಲಕ ನೇಮಿಸಿಕೊಳ್ಳುವುದು.
- **ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರ ನಡೆಯುವ ಸ್ಥಳ, ಮಕ್ಕಳ ಸಂಖ್ಯೆ, ಸ್ವಯಂಸೇವಕರು, ಶಿಕ್ಷಕರ ಹೆಸರು ಇತ್ಯಾದಿ ಸಂಗತಿಗಳನ್ನು ನೀಡಿರುವ ನಮೂನೆಯಂತೆ ಸಿ.ಆರ್.ಪಿ ಮತ್ತು ಬಿ.ಆರ್.ಸಿ ಗಳಿಗೆ ಕಳುಹಿಸುವುದು.**

| ಕೇಂದ್ರ ನಡೆಯುವ ಸ್ಥಳ | ಶಿಕ್ಷಕರ ಹೆಸರು | ಸ್ವಯಂ ಸೇವಕರ ಹೆಸರು ಮತ್ತು ವಿದ್ಯಾರ್ಹತೆ | ಕೇಂದ್ರಕ್ಕೆ ಸೇರುವ ಮಕ್ಕಳ ಸಂಖ್ಯೆ | | ಷರಾ |
|---|---|---|---|---|---|
| | | | ಗಂಡು | ಹೆಣ್ಣು | |
| | | | | | |

➤ **ಚಿಣ್ಣರ ಅಂಗಳ ತರಬೇತಿ:**

- ಪ್ರತಿ ಶೈಕ್ಷಣಿಕ ಜಿಲ್ಲೆಗೆ 06 ಜನರ ಜಿಲ್ಲಾ ತಂಡಕ್ಕೆ (ಡಯಟ್ ನೋಡಲ್ ಅಧಿಕಾರಿ, ಭಾಷೆ, ಗಣಿತ, ಇಂಗ್ಲಿಷ್, ಪರಿಸರ ಅಧ್ಯಯನ, ಸಹ ಪಠ್ಯ ಚಟುವಟಿಕೆಗಳಿಗೆ ಒಬ್ಬೊಬ್ಬರು) ಕೇಂದ್ರ ಕಛೇರಿ ಈ ಕೆಳಗಿನಂತೆ ತರಬೇತಿಯನ್ನು ಆಯೋಜಿಸುತ್ತಿದೆ. ಸಂಬಂಧಿಸಿದ ಡಯಟ್ ಪ್ರಾಂಶುಪಾಲರು ಜಿಲ್ಲಾ ಹಾಗೂ ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳ ಪಟ್ಟಿಯನ್ನು ಕೂಡಲೇ ಈ ಕಛೇರಿಗೆ ಕಳುಹಿಸುವುದು.
- ಡಯಟ್ ಮತ್ತು ಸಂಪನ್ಮೂಲ ವ್ಯಕ್ತಿಗಳ ನಿಯೋಜನೆಗೆ ಈ ಕೆಳಗಿನಂತೆ ಕ್ರಮ ಕೈಗೊಳ್ಳುವುದು

| **ತರಬೇತಿ ದಿನಾಂಕ & ಸ್ಥಳ** | **ಭಾಗವಹಿಸುವ ಶೈಕ್ಷಣಿಕ ಜಿಲ್ಲೆಗಳ ಸಂಪನ್ಮೂಲ ವ್ಯಕ್ತಿಗಳು [ಪ್ರತಿ ಜಿಲ್ಲೆಗೆ – 06 ಮಂದಿಯಂತೆ]** | **ಷರಾ** |
|---|---|---|
| 02.04.2012 ಹಾಗೂ 03.04.2012.<br><br>**ಆರ್.ಐ.ಇ. ಜ್ಞಾನ ಭಾರತಿ, ಬೆಂಗಳೂರು.** | ಬೆಂಗಳೂರು ನಗರ, ಚಿಕ್ಕಮಗಳೂರು, ದಾವಣಗೆರೆ, ಕೋಲಾರ, ಮೈಸೂರು, ತುಮಕೂರು, ಬಿಜಾಪುರ, ಬೆಳಗಾಂ, ಬಳ್ಳಾರಿ, ಬೀದರ್, ಗದಗ, ಗುಲ್ಬರ್ಗಾ, ಯಾದಿಗಿರಿ, ಹಾವೇರಿ, ಕೊಪ್ಪಳ, ರಾಯಚೂರು, | ಕೆಳಕಂಡ ಜಿಲ್ಲೆಯವರು ಜಿಲ್ಲಾ ಆರ್‌ಪಿಗಳನ್ನು ಮುಂದೆ ಸೂಚಿಸಿರುವ ಜಿಲ್ಲಾ ಡಯಟ್‌ಗೆ ಕಳುಹಿಸಿ ತರಬೇತಿಯನ್ನು ಪಡೆದುಕೊಳ್ಳುವುದು. ಟಿ.ಎ. ಡಿ.ಎ.ಯನ್ನು ಘಟಕ ವೆಚ್ಚದ ಮಿತಿ ಅನುಸರಿಸದೆ ನಿಯಮಾನುಸಾರ ಭರಿಸುವುದು.<br>ಬಾಗಲಕೋಟೆ – ಬಿಜಾಪುರದಲ್ಲಿ ತರಬೇತಿ<br>ಮಂಡ್ಯ, ಚಾಮರಾಜನಗರ ಹಾಗೂ ಕೊಡಗು – ಮೈಸೂರುನಲ್ಲಿ ತರಬೇತಿ<br>ಬೆಂಗಳೂರು ಉತ್ತರ, ದಕ್ಷಿಣ ಮತ್ತು ಗ್ರಾಮಂತರ ಹಾಗೂ ರಾಮನಗರ – ಬೆಂಗಳೂರು ನಗರ ಡಯಟ್‌ನಲ್ಲಿ ತರಬೇತಿ<br>ಶಿವಮೊಗ್ಗ, ಮಧುಗಿರಿ– ತುಮಕೂರುನಲ್ಲಿ ತರಬೇತಿ<br>ಧಾರವಾಡ – ಗದಗ್‌ನಲ್ಲಿ ತರಬೇತಿ<br>ಚಿಕ್ಕೋಡಿ – ಬೆಳಗಾಂನಲ್ಲಿ ತರಬೇತಿ<br>ಹಾಸನ್, ದಕ್ಷಿಣ ಕನ್ನಡ ಹಾಗೂ ಉಡುಪಿ– ಚಿಕ್ಕಮಗಳೂರಿನಲ್ಲಿ ತರಬೇತಿ<br>ಚಿತ್ರದುರ್ಗ – ದಾವಣಗೆರೆಯಲ್ಲಿ ತರಬೇತಿ<br>ಉತ್ತರ ಕನ್ನಡ – ಹಾವೇರಿಯಲ್ಲಿ ತರಬೇತಿ<br>ಚಿಕ್ಕಬಳ್ಳಾಪುರ – ಕೋಲಾರ್‌ನಲ್ಲಿ ತರಬೇತಿ |

- ಜಿಲ್ಲೆಗಳ ಸಂಪನ್ಮೂಲ ವ್ಯಕ್ತಿಗಳು ತಮಗೆ ಸಂಬಂಧಿಸಿದ ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡುವುದು. ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರಗಳ ಶಿಕ್ಷಕರಿಗೆ ಹಾಗೂ ಸ್ವಯಂಸೇವಕರಿಗೆ ತರಬೇತಿಯನ್ನು ನೀಡುವುದು. ಸದರಿ ತರಬೇತಿಗಳನ್ನು ದಿನಾಂಕ: 07.04.2012 ರೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸುವುದು.

ಸಂಪನ್ಮೂಲ ವ್ಯಕ್ತಿಗಳು – 01 + 05 ,

ತರಬೇತಿ ಅವಧಿ – 2 ದಿನಗಳು (ವಸತಿ ಸಹಿತ)

ಘಟಕ ವೆಚ್ಚ – ಒಬ್ಬ ಶಿಭಿರಾರ್ಥಿಗೆ 1 ದಿನಕ್ಕೆ ಜಿಲ್ಲಾ ಹಂತದಲ್ಲಿ ರೂ. 200 ಹಾಗೂ ಬ್ಲಾಕ್ ಹಂತದಲ್ಲಿ ರೂ 100 ರಂತೆ ತರಬೇತಿ ವೆಚ್ಚದಲ್ಲಿ ಭರಿಸುವುದು. ಈ ಹಣದಿಂದ ಪ್ರಯಾಣ ವೆಚ್ಚ ಹಾಗೂ ಊಟದ ವ್ಯವಸ್ಥೆಯನ್ನು ನಿರ್ವಹಿಸುವುದು. ನಿಗದಿತ ಘಟಕ ವೆಚ್ಚದ ಮಿತಿಯೊಳಗೆ ಖರ್ಚು ಭರಿಸುವುದು.

ತರಬೇತಿ ಸಾಹಿತ್ಯ – ಹಿಂದಿನ ವರ್ಷದ ಚಿಣ್ಣರ ಅಂಗಳ-1,2 ಹಾಗೂ 3 ಅಭ್ಯಾಸ ಪುಸ್ತಕ ಮತ್ತು ಬೋಧಕರ ಕೈಪಿಡಿಯನ್ನು ಬಳಸಿ.

**ಸಾಹಿತ್ಯ ಮುದ್ರಣ ಮತ್ತು ರವಾನೆ:**

- ಚಿಣ್ಣರ ಅಂಗಳ ವಿಶೇಷ ತರಬೇತಿ ಅಭ್ಯಾಸ ಪುಸ್ತಕ ಮತ್ತು ಚಿಣ್ಣರ ಅಂಗಳ ಬೋಧಕರ ಕೈಪಿಡಿಯನ್ನು (ಕನ್ನಡ ಹಾಗೂ ಉರ್ದು ಮಾಧ್ಯಮದ ಸಾಹಿತ್ಯ) ಕೇಂದ್ರ ಕಛೇರಿಯಿಂದ ಒದಗಿಸಲಾಗುವುದು. ಮರಾಠಿ, ತೆಲುಗು ಹಾಗೂ ತಮಿಳು ಮಾಧ್ಯಮದ ಸಾಹಿತ್ಯ ಅಗತ್ಯತೆಗೆ ಅನುಗುಣವಾಗಿ ಜಿಲ್ಲಾ ಹಂತದಲ್ಲಿ ಹಿಂದಿನ ಸಾಲಿನಂತೆ ಸಾಹಿತ್ಯ ಫೋಟೋ ಪ್ರತಿ ಮಾಡಿಕೊಳ್ಳುವುದು. ಸಾಹಿತ್ಯವನ್ನು ಬ್ಲಾಕ್‌ಗಳಿಗೆ / ಕೇಂದ್ರಗಳಿಗೆ ಸಕಾಲದಲ್ಲಿ ಹಂಚುವುದು.
- ಹೊಸ ಚಿಣ್ಣರ ಅಂಗಳ ಪುಸ್ತಕಗಳು ಸರಬರಾಜು ಆಗುವವರೆಗೂ ಹಿಂದಿನ ವರ್ಷದಲ್ಲಿ ಒದಗಿಸಿರುವ ಪುಸ್ತಕಗಳನ್ನು ಉಪಯೋಗಿಸಿ ಕೇಂದ್ರಗಳನ್ನು ಪ್ರಾರಂಭಿಸುವುದು.

➢ **ಹಣಕಾಸು:**

- ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರಗಳನ್ನು ನಡೆಸುವ ಸಂಬಂಧ ಅನುದಾನವನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ಸಕಾಲದಲ್ಲಿ ಬ್ಲಾಕ್ ಹಂತದ ಅಧಿಕಾರಿಗಳಿಗೆ ಹಾಗೂ ಬ್ಲಾಕ್‌ಗಳಿಂದ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಹಾಗೂ ಮುಖ್ಯಶಿಕ್ಷಕರ ಜಂಟಿ ಖಾತೆಗೆ ಸಕಾಲದಲ್ಲಿ ಬಿಡುಗಡೆಗೊಳಿಸಿ ಕೇಂದ್ರಗಳನ್ನು ನಡೆಸಲು ವ್ಯವಸ್ಥೆಗೊಳಿಸಬೇಕು.
- ಶಾಲೆಯ ಮುಖ್ಯಶಿಕ್ಷಕರು ಕೇಂದ್ರ ನಿರ್ವಹಣೆಗೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ಕೇಂದ್ರಗಳಿಗೆ ಒದಗಿಸಲು ತಿಳಿಸುವುದು. ಖರ್ಚು ಮಾಡಿದ ವಿವರಗಳಿಗೆ ನಿಯಮಾನುಸಾರ ಲೆಕ್ಕಪತ್ರ ನಿರ್ವಹಿಸುವ ಹೊಣೆ ಸಿ.ಆರ್.ಪಿ ಹಾಗೂ ಮುಖ್ಯಶಿಕ್ಷಕರದ್ದಾಗಿರುತ್ತದೆ. ಕೇಂದ್ರಗಳು ಸಮರ್ಪಕವಾಗಿ ನಡೆಯುವಂತೆ ಮುಖ್ಯಶಿಕ್ಷಕರು ಕೇಂದ್ರದಲ್ಲಿದ್ದುಕೊಂಡು ಉಸ್ತುವಾರಿಯನ್ನು ಕ್ರಮಬದ್ಧವಾಗಿ ನಿರ್ವಹಿಸಬೇಕು ಈ ಕೇಂದ್ರದಲ್ಲಿ ನಿರಂತರವಾಗಿ ಕಾರ್ಯ ನಿರ್ವಹಿಸಿದ ಶಿಕ್ಷಕರು/ಮುಖ್ಯಶಿಕ್ಷಕರಿಗೆ ಕೆ.ಸಿ.ಎಸ್.ಆರ್ ನಿಯಮ 113 ರ ಉಪ ನಿಯಮ 3 (ಎ) ಪ್ರಕಾರ ಗಳಿಕೆ ರಜೆ ಸೌಲಭ್ಯವನ್ನು ನೀಡುವುದು.
- ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರಗಳನ್ನು ನಡೆಸುವ ಸಂಬಂಧ ಅನುದಾನವನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರು ದಿನಾಂಕ: 12.04.2011 ರ ಎ.ಪಿ.ಸಿ ಸಭೆಯಲ್ಲಿ ಸೂಚಿಸಿರುವಂತೆ 2011-12ನೇ ಸಾಲಿನ committed expenditure ಎಂದು ಕಡತಗಳಲ್ಲಿ ಗುರ್ತಿಸಿಕೊಂಡು ಸಕಾಲದಲ್ಲಿ ಬ್ಲಾಕ್ ಹಂತದ ಅಧಿಕಾರಿಗಳಿಗೆ ಹಾಗೂ ಬ್ಲಾಕ್‌ಗಳಿಂದ ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಹಾಗೂ ಮುಖ್ಯಶಿಕ್ಷಕರ ಜಂಟಿ ಖಾತೆಗೆ ಸಕಾಲದಲ್ಲಿ ಬಿಡುಗಡೆಗೊಳಿಸಿ ಕೇಂದ್ರಗಳನ್ನು ನಡೆಸಲು ವ್ಯವಸ್ಥೆಗೊಳಿಸಬೇಕು.
- ಶಾಲೆಯ ಮುಖ್ಯಶಿಕ್ಷಕರು ಕೇಂದ್ರ ನಿರ್ವಹಣೆಗೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ಕೇಂದ್ರಗಳಿಗೆ ಒದಗಿಸಲು ತಿಳಿಸುವುದು. ಖರ್ಚು ಮಾಡಿದ ವಿವರಗಳಿಗೆ ನಿಯಮಾನುಸಾರ ಲೆಕ್ಕಪತ್ರ ನಿರ್ವಹಿಸುವ ಹೊಣೆ ಸಿ.ಆರ್.ಪಿ ಹಾಗೂ ಮುಖ್ಯಶಿಕ್ಷಕರದ್ದಾಗಿರುತ್ತದೆ. ಕೇಂದ್ರಗಳು ಸಮರ್ಪಕವಾಗಿ ನಡೆಯುವಂತೆ ಮುಖ್ಯಶಿಕ್ಷಕರು ಕೇಂದ್ರದಲ್ಲಿದ್ದುಕೊಂಡು ಉಸ್ತುವಾರಿಯನ್ನು ಕ್ರಮಬದ್ಧವಾಗಿ ನಿರ್ವಹಿಸಬೇಕು ಈ ಕೇಂದ್ರದಲ್ಲಿ ನಿರಂತರವಾಗಿ ಕಾರ್ಯ ನಿರ್ವಹಿಸಿದ ಶಿಕ್ಷಕರು/ಮುಖ್ಯಶಿಕ್ಷಕರಿಗೆ ಕೆ.ಸಿ.ಎಸ್.ಆರ್ ನಿಯಮ 113 ರ ಉಪ ನಿಯಮ 3 (ಎ) ಪ್ರಕಾರ ಗಳಿಕೆ ರಜೆ ಸೌಲಭ್ಯವನ್ನು ನೀಡುವುದು.
- ರಜಾ ಅವಧಿಯಲ್ಲಿ ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರಗಳನ್ನು ವ್ಯವಸ್ಥೆ ಮಾಡಲು ಹಾಗೂ ಉಸ್ತುವಾರಿ ಕಾರ್ಯ ನಿರ್ವಹಿಸಿದ ಸಿ.ಆರ್.ಪಿ. / ಬಿ.ಆರ್.ಪಿ ಯವರಿಗೆ ವಾಸ್ತವವಾಗಿ ಕಾರ್ಯ ನಿರ್ವಹಿಸಿದ ದಿನಗಳಿಗೆ ಅನುಗುಣವಾಗಿ ಕೆ.ಸಿ.ಎಸ್.ಆರ್. ನಿಯಮ 113ರ ಉಪ ನಿಯಮ 3 (ಎ) ಪ್ರಕಾರ ಗಳಿಕೆ ರಜೆ ಸೌಲಭ್ಯವನ್ನು ನೀಡುವುದು.

## ಘಟಕ ವೆಚ್ಚ ಮರು ಹಂಚಿಕೆ

| ಘಟಕ ವೆಚ್ಚದ ಮರು ಹಂಚಿಕೆ (ಪ್ರತಿ ಮಗುವಿನ ಘಟಕ ವೆಚ್ಚ 3 ತಿಂಗಳ ಅವಧಿಗೆ) | | |
|---|---|---|
| ವಿವರ | ವಸತಿ ರಹಿತ ಚಿಣ್ಣರ ಅಂಗಳ (ಪ್ರತಿ ಮಗುವಿಗೆ) | ವಸತಿಸಹಿತ ಚಿಣ್ಣರ ಅಂಗಳ (ಪ್ರತಿ ಮಗುವಿಗೆ) |
| ಸ್ವಯಂ ಸೇವಕರ ಗೌರವಧನ (ಗರಿಷ್ಟ ರೂ. 3000 ಒಬ್ಬರಿಗೆ ಮಾಸಿಕ) (ವಸತಿ ರಹಿತ ಕೇಂದ್ರಕ್ಕೆ – ಒಬ್ಬರು , ವಸತಿ ಸಹಿತ ಕೇಂದ್ರಕ್ಕೆ – ಇಬ್ಬರು ಸ್ವಯಂ ಸೇವಕರು) | 360 | 720 |
| ಉಪಹಾರ/ಊಟ ( ದಿನಕ್ಕೆ 2 ಊಟ, 1 ಉಪಹಾರ ) | 0 | 2700 |
| ಉಪಹಾರ/ಊಟ | 700 | 0 |
| ಲೇಖನ ಸಾಮಗ್ರಿ [ಪೆನ್, ಪೆನ್ಸಿಲ್, ಕ್ರಯಾನ್ಸ್, ರಬ್ಬರ್, ಜಾಮಿತ್ರ ಬಾಕ್ಸ್, 6 ನೋಟ್ ಬುಕ್(100 ಪುಟಗಳು) ] | 100 | 200 |
| ಕಲಿಕೆ ಬೋಧನೆ ಸಾಮಗ್ರಿ (ಚಾರ್ಟ್ಸ್‌ಗಳು, ಮಾದರಿಗಳು, ಇತ್ಯಾದಿ) | 40 | 50 |
| ಸಹಾಯಕ | 0 | 240 |
| ದೈನಂದಿನ ವಸ್ತುಗಳು (ಸೋಪು, ಕೊಬ್ಬರಿಎಣ್ಣೆ, ತಟ್ಟೆ, ಲೋಟ, ಮಗ್, ಬಕೇಟು, ಬ್ಯಾಗ್, ಸ್ಲಿಪ್ಪರ್ಸ್ (1 ಜೊತೆ), | 0 | 150 |
| ಜಮಖಾನ ಮತ್ತು ಬೆಡ್-ಶೀಟ್ | 0 | 170 |
| ಸಾದಿಲ್ವಾರು | 30 | 50 |
| ಪ್ರವಾಸ (Field trip) | 100 | 100 |
| ವೈದ್ಯಕೀಯ ತಪಾಸಣೆ | 0 | 50 |
| ಯುನಿಫಾರ್ಮ್ 1 ಜೊತೆ, | 0 | 300 |
| ಫೋಟೋ ID ಕಾರ್ಡ್ | 30 | 30 |
| ದಾಖಲೀಕರಣ | 40 | 40 |
| ಅಭ್ಯಾಸ ಪುಸ್ತಕಗಳು ಮತ್ತು ಬೋಧಕರ ಕೈಪಿಡಿ, ಟಿ.ಎಲ್.ಎಂ ಗಳಿಗಾಗಿ ರಾಜ್ಯ ಕಛೇರಿಯ ಬಳಕೆಗಾಗಿ | 100 | 200 |
| ಒಟ್ಟು | 1500 | 5000 |

### ➢ ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರಗಳ ನಿರ್ವಹಣೆ ಬಗ್ಗೆ ಮುಖ್ಯಾಂಶಗಳು

- ಕೇಂದ್ರದ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ತಮಗೆ ತರಬೇತಿಯ ಅವಧಿಯಲ್ಲಿ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು ನೀಡಿದ ಮಾರ್ಗದರ್ಶನದಂತೆ ಕೇಂದ್ರಗಳ ನಿರ್ವಹಣೆ ಹಾಗೂ ಕಲಿಕಾ ಪೂರಕ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಕಡ್ಡಾಯವಾಗಿ ನಡೆಸುವುದು.
- ಪ್ರತಿ ದಿನ ಶಿಕ್ಷಕರು ತರಗತಿಯಲ್ಲಿ ನಡೆಸಿರುವ ಕಲಿಕಾ ಚಟುವಟಿಕೆಗಳ ಬಗ್ಗೆ ಹಾಗೂ ವಿದ್ಯಾರ್ಥಿಗಳ ಕಲಿಕಾ ಸಾಧನೆ ಬಗ್ಗೆ ವರದಿಗಳನ್ನು ನಿರ್ವಹಿಸುವುದು. ತರಗತಿ ಕಾರ್ಯಕ್ರಮಗಳಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಬೇಕು. ಮುಖ್ಯವಾಹಿನಿಗೆ ಸೇರಿಸುವುದು ಕಡ್ಡಾಯವಾಗಿರುತ್ತದೆ.
- ನಿಗದಿತ ಘಟಕವೆಚ್ಚವನ್ನು ನಿಯಮಾನುಸಾರ ಮರುಹಂಚಿಕೆ ಮಾಡಿ ಕೇಂದ್ರಗಳನ್ನು ನಡೆಸುವ ಜವಾಬ್ದಾರಿ ಸಂಬಂಧಿಸಿದ ಮುಖ್ಯ ಶಿಕ್ಷಕರದ್ದಾಗಿರುತ್ತದೆ. ಸದರಿ ಲೆಕ್ಕದ ಬಗ್ಗೆ ಸೂಕ್ತ ದಾಖಲೆಗಳನ್ನು ನಿರ್ವಹಿಸಬೇಕು. ಎಸ್.ಡಿ.ಎಂ.ಸಿ/ಸ್ಥಳೀಯ ದಾನಿಗಳಿಂದ ಅನುದಾನದ ಸಹಕಾರವನ್ನು ಪಡೆಯಬಹುದು.
- ಕೇಂದ್ರಗಳ ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು ಹಾಗೂ ಕಲಿಕೆಗೆ ಮಕ್ಕಳನ್ನು ಆಕರ್ಷಿಸಲು ಪೂರಕವಾಗಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವುದು.

ಕೇಂದ್ರ ನಡೆಸುವ 3 ತಿಂಗಳ ಅವಧಿಯಲ್ಲಿ ಕನಿಷ್ಠ 1 ಬಾರಿಯಾದರೂ ಸ್ಥಳೀಯ ವೈದ್ಯರ ಸಹಕಾರದಿಂದ ಮಕ್ಕಳ ವೈದ್ಯಕೀಯ ತಪಾಸಣೆಯನ್ನು ನಡೆಸಿ ರಾಜ್ಯ ಕಛೇರಿಯಿಂದ ನೀಡಿದ ವೈದ್ಯಕೀಯ ತಪಾಸಣ ನಮೂನೆಯಲ್ಲಿ ವೈದ್ಯರು ನೀಡಿದ ವರದಿ ಹಾಗೂ ಸಲಹೆ ನಮೂದಿಸಬೇಕು.

- ಮಕ್ಕಳಿಗೆ 1 ದಿನ ಸ್ಥಳೀಯ ಪ್ರವಾಸ (ಶೈಕ್ಷಣಿಕ ಹಿನ್ನೆಲೆಯುಳ್ಳ ಸ್ಥಳಕ್ಕೆ) ಕಾರ್ಯಕ್ರಮದ ವ್ಯವಸ್ಥೆಯನ್ನು ಮಾಡುವುದು.
- ಚಿಣ್ಣರ ಅಂಗಳ ಕಾರ್ಯಕ್ರಮದ ಮೂಲಕ ಮಕ್ಕಳು ಸಾಧಿಸಿರುವ ಕಲಿಕಾಮಟ್ಟವನ್ನು ಗುರುತಿಸಲು ಮಗುವಿನ ವಯಸ್ಸಿಗೆ ಅನುಗುಣವಾಗಿ ಹಾಗೂ ಸೂಕ್ತ ತರಗತಿಗೆ ಸೇರಿಸಲು ಸಾಫಲ್ಯ ಪರೀಕ್ಷೆಯನ್ನು ನಡೆಸಿ, ಸೂಕ್ತ ತರಗತಿಗಳಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕು. ತಾತ್ಕಾಲಿಕವಾಗಿ ಈಗಾಗಲೇ ದಾಖಲಿಸಲಾಗಿರುವ ದಾಖಲಾತಿ ವಹಿಯಲ್ಲಿ, ಯಾವ ತರಗತಿಗೆ ಸೇರಿಸಲಾಗುವುದೋ ಆ ತರಗತಿಯನ್ನು ನಮೂದಿಸಬೇಕು.

➢ ದಾಖಲೀಕರಣ:

- ಜಿಲ್ಲೆಯಲ್ಲಿ ನಡೆಯುವ ಚಿಣ್ಣರ ಅಂಗಳ ಕೇಂದ್ರಗಳ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ದಾಖಲೀಕರಣವನ್ನು ಡಿವೈಪಿಸಿ ಮತ್ತು ಬಿಆರ್‌ಸಿ ಯವರು ಮಾಡುವುದು. ಇದಕ್ಕಾಗಿ ಪ್ರತಿ ಜಿಲ್ಲೆಗೆ ರೂ. 400 ನ್ನು ಜಿಲ್ಲೆಯ ನಿರ್ವಹಣಾ ವೆಚ್ಚದಿಂದ ಭರಿಸಬಹುದು.

ದಾಖಲೀಕರಣದ ಪುಟಗಳ ಸಂಖ್ಯೆ 15 ರಿಂದ 20 ಇರಲಿ. ಕೇಂದ್ರದ ಹೆಸರು, ಮಕ್ಕಳ ಸಂಖ್ಯೆ (ಹಾಜರಾತಿ, ತರಗತಿವಾರು, ಲಿಂಗವಾರು) ಅಧ್ಯಾಪಕರು/ಸ್ವಯಂ ಸೇವಕರು, ಭೇಟಿ ನೀಡಿದ ಅಧಿಕಾರಿಗಳು, ಭೇಟಿಗಳ ಸಂಖ್ಯೆ, ಸಂದರ್ಶಕರ ಅಭಿಪ್ರಾಯನುಸಾರ, ಮಕ್ಕಳ ಕಲಿಕೆಯ ಮಟ್ಟ, ಸಮುದಾಯದ ಸಹಕಾರ, ನೆರವು, ಚಿಣ್ಣರ ಅಂಗಳ ನಡೆದಿರುವ ಪ್ರಕ್ರಿಯೆ ಕುರಿತ ಮಾಹಿತಿ, ಮಕ್ಕಳ/ಅಧ್ಯಾಪಕರ/ಪೋಷಕರ ಅಭಿಪ್ರಾಯ ; ಗುರುತಿಸಿದ ವಿಶೇಷತೆ ಇತ್ಯಾದಿ ಸಂಗತಿಗಳನ್ನು ಆಧರಿಸಿ ಸೂಕ್ತ ಫೋಟೋಗಳೊಂದಿಗೆ (ಅನಗತ್ಯವಾದವು ಬೇಡ) **ಐ.ಇ.ಪಿ ನಮೂನೆಗಳನ್ನು ಕಡ್ಡಾಯವಾಗಿ ನಿರ್ವಹಿಸಿ ದಾಖಲೀಕರಣದಲ್ಲಿ ಸೇರಿಸಿ ವರದಿಯನ್ನು ತಯಾರಿಸಿ 30 ಜುಲೈ 2012ರೊಳಗೆ ರಾಜ್ಯ ಕಛೇರಿಗೆ ಸಲ್ಲಿಸುವುದು.**

15.07.2012 ರಂದು ಮಕ್ಕಳನ್ನು ಔಪಚಾರಿಕವಾಗಿ ಶಾಲಾ ತರಗತಿಗಳಲ್ಲಿ ಸೇರಿಸಿ ಚಿಣ್ಣರ ಅಂಗಳ ವಿಶೇಷ ತರಬೇತಿ ಕೇಂದ್ರದಿಂದ ಬಂದ ಮಕ್ಕಳು ನಿರಂತರವಾಗಿ ಶಾಲೆಗೆ ಬರುತ್ತಿರುವ ಬಗ್ಗೆ ನಿಗಾ ವಹಿಸುವುದು. ಈ ರೀತಿ ದಾಖಲಾದ ಮಕ್ಕಳ ಕಲಿಕೆ ಬಗ್ಗೆ ಸಂಬಂಧಿಸಿದಂತೆ ಶಾಲಾ ಶಿಕ್ಷಕರು ಹೆಚ್ಚಿನ ಕಾಳಜಿ ವಹಿಸಿ ಅವರನ್ನು ಶಾಲೆಯಲ್ಲಿ ಉಳಿಸಿಕೊಳ್ಳಲು ಸರ್ವ ಪ್ರಯತ್ನ ಮಾಡಬೇಕು. ಅವರ ಕಲಿಕೆಯಲ್ಲಿ ಇರುವ ತೊಂದರೆಗಳನ್ನು ಪರಿಹರಿಸಿ ಇತರೆ ಮಕ್ಕಳೊಂದಿಗೆ ಬೆರೆಯಲು ಸೂಕ್ತ ಅವಕಾಶ ಕಲ್ಪಿಸಿಕೊಡಬೇಕು. ಅಧ್ಯಾಪಕರು/ಎಸ್.ಡಿ.ಎಂ.ಸಿ ಸದಸ್ಯರು/ ಗ್ರಾಮ ಪಂಚಾಯಿತಿ ಸದಸ್ಯರು. ಈ ಮಕ್ಕಳನ್ನು ದತ್ತು ತೆಗೆದುಕೊಳ್ಳುವಂತೆ ಪ್ರೇರೇಪಿಸುವುದು.

## ಕಾರ್ಯಕ್ರಮದ ಸ್ಥೂಲ ವೇಳಾಪಟ್ಟಿ

| | | |
|---|---|---|
| 1 | ಜಿಲ್ಲಾ ಆರ್.ಪಿ ಗಳ ಆಯ್ಕೆ ಹಾಗೂ ಆರ್.ಪಿ.ಗಳ ಪಟ್ಟಿ ಕೇಂದ್ರ ಕಛೇರಿಗೆ ಸಲ್ಲಿಕೆ | 28.03.2012 |
| 2 | ಅಧ್ಯಾಪಕರ ಪಟ್ಟಿ ತಯಾರಿಕೆ | 29.03.2012 |
| 3 | ಚಿಣ್ಣರ ಅಂಗಳ ನಡೆಯುವ ಸ್ಥಳ ಗುರುತಿಸುವಿಕೆ | 29.03.2012 |
| 4 | ಸ್ವಯಂಸೇವಕರ/ಸಹಾಯಕರ ಪಟ್ಟಿ ತಯಾರಿಕೆ | 29.03.2012 |
| 5 | ಒಒಎಸ್‌ಸಿ ಮಕ್ಕಳ ಮತ್ತು ಪೋಷಕರಿಗೆ ಮನವರಿಕೆ | 29.03.2011 |
| 6 | ಜಿಲ್ಲಾ ಆರ್.ಪಿ ತರಬೇತಿ | 07.04.2012 ಹಾಗೂ 08.04.2012 |
| 7 | ತಾಲ್ಲೂಕು ಆರ್.ಪಿ ತರಬೇತಿ | 10.04.2012 ರ ಒಳಗೆ |
| 8 | ಶಿಕ್ಷಕರ/ ಸ್ವಯಂಸೇವಕರ ತರಬೇತಿ | 12.04.2012 ರ ಒಳಗೆ |

| | | |
|---|---|---|
| 9 | ಚಿಣ್ಣರ ಅಂಗಳ ಪ್ರಾರಂಭ | 15.04.2012 |
| 10 | ಪೂರ್ವಭಾವಿ ಪರೀಕ್ಷೆ | 21.04.2012 |
| 11 | ಮಧ್ಯಂತರ ಮೌಲ್ಯಮಾಪನ | 15.06.2012 |
| 12 | ಅಂತಿಮ ಮೌಲ್ಯಮಾಪನ – ಸಾಫಲ್ಯ ಪರೀಕ್ಷೆ | 13.07.2012 |
| 13 | ಸಾಂಸ್ಕೃತಿಕ ಕಾರ್ಯಕ್ರಮ | 14.07.2012 |
| 14 | ಮಗುವಿನ ವಯಸ್ಸಿಗೆ ಅನುಗುಣವಾಗಿ ಸೂಕ್ತ ಔಪಚಾರಿಕ ಶಾಲಾ ತರಗತಿಯಲ್ಲಿ ಸೇರಿಸುವುದು. | 15.07.2012 |

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ,
ಬೆಂಗಳೂರು

**ಕ್ರಮಕ್ಕಾಗಿ**

1. ರಾಜ್ಯದ ಎಲ್ಲಾ ಡಿಡಿಪಿಐ ಮತ್ತು ಡಿವೈಪಿಸಿ ಯವರಿಗೆ
2. ರಾಜ್ಯದ ಎಲ್ಲಾ ಬಿ.ಇ.ಒ/ಬಿಆರ್.ಸಿ ಯವರಿಗೆ. ಈ ಪತ್ರ ತಲುಪಿದ ಕೂಡಲೇ ಸಿ.ಆರ್.ಪಿ/ಮುಖ್ಯಶಿಕ್ಷಕರ ಸಭೆ ಕರೆದು ಬ್ಲಾಕ್ ಯೋಜನೆ ಸಿದ್ಧಪಡಿಸಬೇಕು ಹಾಗೂ ಸುತ್ತೋಲೆಯ ಪ್ರತಿಗಳನ್ನು ಒದಗಿಸಬೇಕು.

**ಮಾಹಿತಿಗೆ ಮತ್ತು ಕ್ರಮಕ್ಕಾಗಿ**

1. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
2. ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಧಾರವಾಡ. ಪ್ರಾಥಮಿಕ ಶಿಕ್ಷಣ ಬೆಂಗಳೂರು–ಡಿಎಸ್ಇಆರ್‌ಟಿ ಬೆಂಗಳೂರು, ಅಲ್ಪಸಂಖ್ಯಾತ ಭಾಷೆಗಳು. ಸರ್ವ ಶಿಕ್ಷಣ ಅಭಿಯಾನ–ಬೆಂಗಳೂರು.
3. ಸಹನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ, ಮೈಸೂರು, ಎಸಿಪಿಐ ಕಛೇರಿ ಧಾರವಾಡ/ಗುಲ್ಬರ್ಗಾ. ಪ್ರಿನ್ಸಿಪಾಲರು ಸಿಟಿಇ – ಮೈಸೂರು, ಮಂಗಳೂರು – ಚಿತ್ರದುರ್ಗ – ಗುಲ್ಬರ್ಗಾ , ಜಮಖಂಡಿ, ಮತ್ತು ಬೆಳಗಾವಿ.
4. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಅನುಪಾಲನಾ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಡಿಡಿಪಿಐ ಅಭಿವೃದ್ಧಿ – ಡಯಟ್ ಸಂಸ್ಥೆ.
6. ಸರ್ಕಾರದಿಂದ ನೇಮಿಸಲಾಗಿರುವ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಅನುಪಾಲನಾ ಕ್ರಮಕ್ಕಾಗಿ

**ಮಾಹಿತಿಗಾಗಿ ಸಲ್ಲಿಸಿದೆ.**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.